

ಯೋಗ, ಯಕ್ಷಗಾನಗಳ ತಾಳಮದ್ದಳೆಗಳಿಲ್ಲದೆ, ಹೆಜ್ಜೆಗಳ ಸಣ್ಣ ಕುಣಿತದಲ್ಲೇ ಎದುರಿಗಿರುವವರ ಎದೆಯಲ್ಲಿ ಖುಷಿಯ ಅಲೆಗಳನ್ನು ಎಬ್ಬಿಸುವವನು. ಸರ್ಕಸ್‌ನ ಲಾಗಗಳನ್ನು, ಎಗರುಗಳನ್ನು ಮಾಡದೇ ಬರೀ ಭುಜ, ಕೈ–ಕಾಲುಗಳ ನರ್ತನದಲ್ಲಿಯೇ ಜನರನ್ನು ಆಕರ್ಷಿಸುವ ಕಲೆಗಾರಿಕೆಯವನು. ಅಭಿನಯ, ಸಾಹಿತ್ಯ ಮತ್ತು ಸಂಗೀತದಲ್ಲಿ ಪ್ರಾಣವನ್ನೂ, ಪುಸ್ತಕಗಳ ಓದಿನಲ್ಲಿ ಜೀವನದ ಆನಂದವನ್ನೂ ಪೋಷಿಸುವ ಹವ್ಯಾಸದವನು. ಹಣ ಸಂಪಾದನೆ, ಮೋಜು, ವೈಭವಗಳ ಬಗ್ಗೆ ಹೆಚ್ಚಿನ ಆಸೆ ಇಲ್ಲದೆ, ಕಲೆಗಾಗಿ ಕಲೆ ಎಂಬಂತೆ ದುಡಿದ, ಸರಳಜೀವಿ. ದುಡಿಮೆಯಲ್ಲಿ ಹಣ, ನಟನೆಯಲ್ಲಿ ಕೀರ್ತಿ – ಇವು ಗಳಿಸಿರುವಷ್ಟೇ ಸಾಕು ಎನ್ನುವಂತಹ ಸಮಾಧಾನದ ದಿನಗಳಿಗೆ ಕಾಲಿಡುತ್ತಿರುವ ಇಳಿವಯಸ್ಸಿನ ಸಂತೃಪ್ತಜೀವಿ.

ಇಂಥ ನಟನ ಕುರಿತು, ದೂರದರ್ಶನದ ಹೊಸತೊಂದು ಚಾನಲ್‌ನವರು, ಮನೆಗೆ ಬಂದು ಅವನ ಸಂದರ್ಶನ ತೆಗೆದುಕೊಳ್ಳಲು ವ್ಯವಸ್ಥೆ ಮಾಡಿಕೊಂಡಿದ್ದರು. ತನ್ನೊಂದಿಗೆ ಒಬ್ಬ ಕಳ್ಳನಿದ್ದಾನೆ ಎಂಬ ಗುಮಾನಿ ಇನ್ನೊಮ್ಮೆ ಸತೀಶನನ್ನು ಕಾಡಿದ್ದು, ಆ ಸಂದರ್ಶನದ ಸಮಯದಲ್ಲಿ.

ಹಾಗೆ ನೋಡಿದರೆ ಸತೀಶನಿಗೆ ನೆನಪಿನ ಶಕ್ತಿ ಅಗಾಧವೇ. ಏಕಗ್ರಾಹಿ ಎಂದು ವಿದ್ಯಾರ್ಥಿ ದೆಸೆಯಿಂದಲೇ ಗುರುತಿಸಲ್ಪಟ್ಟ ವ್ಯಕ್ತಿ. ಒಂದು ಸಲ ತನ್ನ ಮಾತುಗಳನ್ನು, ಸಂಭಾಷಣೆಯ ಅಂಶಗಳನ್ನು ಒಂದಿಷ್ಟು ಗುರುತು ಹಾಕಿಕೊಂಡರೆ ಸಾಕು, ಅವೆಲ್ಲ ಪುಟಗಳೂ ಮೆದುಳ ಪರದೆಯ ಮೇಲೆ ಸ್ಕ್ಯಾನ್ ಆಗಿರುತ್ತಿದ್ದವು. ಅವನು ಮೈಕ್ ಮುಂದೆಯೋ, ಕ್ಯಾಮೆರಾದ ಮುಂದೆಯೋ ನಿಂತರೆ, ಆ ಮಾತುಗಳೆಲ್ಲವೂ ಅವನ ಕಣ್ಣ ಮುಂದೆ ಸಾಲುವಾರು, ಕಂಡಿಕೆವಾರು, ಪುಟವಾರು ಸರಿಯುತ್ತ ಹೋಗುತ್ತಿದ್ದವು. ಎಡರು ತೊಡರುಗಳಿಲ್ಲದೆ ಅವನ ನಾಲಿಗೆಯ ಮೇಲೆ